ಹೀಗಾಗುತ್ತದೆ. ಆದರೆ ನಿಜವಾದ ವಿಮರ್ಶಕನು ಎಲ್ಲೇ ಬರೆಯಲಿ ಅಥವಾ ಮಾತನಾಡಲಿ ಅವನು ತನ್ನ ಓದಿನ, ಅವಲೋಕನದ ಅನುಭವಕ್ಕೆ ಮಾತ್ರ ಬದ್ಧನಾಗಿರುತ್ತಾನೆ.

4 ಸಾಹಿತ್ಯದ ವಿದ್ಯಾರ್ಥಿಯಾಗಿ ನನಗೆ ಅನ್ನಿಸುವುದು ಸಾಹಿತ್ಯ ವಿಮರ್ಶೆಯೂ ಸಾಹಿತ್ಯದ ಒಂದು ಪ್ರಕಾರವೇ ಎಂದು. ಪ್ರಬಂಧ ಪ್ರಕಾರಕ್ಕೆ ಹತ್ತಿರವಾಗಿರುವ ಪ್ರಕಾರ ಇದು. ಅಂದರೆ ಒಬ್ಬ ಕವಿ ಏಕೆ ಕವಿತೆ ರಚಿಸುತ್ತಾನೋ, ಓರ್ವ ಕತೆಗಾರ ಏಕೆ ಕತೆ ಬರೆಯುತ್ತಾನೋ ಅಥವಾ ಒಬ್ಬ ನಾಟಕಕಾರ ಏಕೆ ನಾಟಕ ರಚಿಸುತ್ತಾನೋ ಅದೇ ಕಾರಣದಿಂದ, ಒತ್ತಡದಿಂದ ಓರ್ವ ವಿಮರ್ಶಕನೂ ವಿಮರ್ಶೆ ಬರೆಯುವುದು. ಜಗತ್ತಿನ ಯಾವುದೇ ಭಾಷೆಯ ಒಳ್ಳೆಯ ವಿಮರ್ಶಕರನ್ನು ಗಮನಿಸಿದರೆ ಇದು ವೇದ್ಯವಾದೀತು. ವಿಮರ್ಶಕನು ಕೇವಲ ಪುಸ್ತಕವನ್ನು ನೋಡುತ್ತಿರುವುದಿಲ್ಲ, ಪುಸ್ತಕಗಳ ಮೂಲಕವೂ, ಅದರಾಚೆಗೂ ನೋಡುತ್ತಿರುತ್ತಾನೆ. ಅಂದರೆ ಕೃತಿ ಅಥವಾ ಕೃತಿಕಾರನ ಬಗ್ಗೆ ಮಾತ್ರ ಬರೆಯುತ್ತಿರುವುದಿಲ್ಲ, ಪರ್ಯಾಯವಾಗಿ ತನ್ನ ಲೋಕದೃಷ್ಟಿಯನ್ನೂ ಮಂಡಿಸುತ್ತಿರುತ್ತಾನೆ. ಜೀವನವನ್ನು ಕುರಿತ ಅವನ ದರ್ಶನ ಆ ಮೂಲಕ ವ್ಯಕ್ತವಾಗುತ್ತಿರುತ್ತದೆ. ತನ್ನ ಆದ್ಯತೆ, ಅಭಿರುಚಿ, ಸಾಮಾಜಿಕ–ರಾಜಕೀಯ ಅಭಿಪ್ರಾಯಗಳನ್ನೂ ಅವನು ಪರೋಕ್ಷವಾಗಿ ತನ್ನ ವಿಮರ್ಶಾ ಬರಹಗಳ ಮೂಲಕ ಸೂಚಿಸುತ್ತಿರುತ್ತಾನೆ. ಕವಿಯೊಬ್ಬ ಒಂದು ಹಕ್ಕಿಯ ಬಗ್ಗೆ ಅಥವಾ ಮರದ ಬಗ್ಗೆ ಬರೆದಾಗ ಕೇವಲ ಅವುಗಳ ಬಗ್ಗೆ ಬರೆಯುತ್ತಿರುವುದಿಲ್ಲವಷ್ಟೆ. ತನ್ನ ಅನುಭವವನ್ನು, ಜೀವನದೃಷ್ಟಿಯನ್ನು ಸೂಚಿಸಲು ಅವುಗಳು ಅವನಿಗೆ ಒದಗಿ ಬರುತ್ತಿರುತ್ತವೆ ಅಷ್ಟೆ. ಹಾಗೆಯೇ ಒಂದು ಟೆಕ್ಸ್ಟ್ ಬಗ್ಗೆ ವಿಮರ್ಶಕ ಬರೆಯುತ್ತಿರುವಾಗ ಅದು ಅವನು ಮತ್ತೇನನ್ನೋ ಧ್ಯಾನಿಸಲು, ಹೇಳಿಕೊಳ್ಳಲು ಒಂದು ಪ್ರಿಟೆಕ್ಸ್ಟ್ ಕೂಡ ಆಗಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಸಾಹಿತ್ಯ ಬೇರೆ, ವಿಮರ್ಶೆ ಬೇರೆ ಎಂದು ಬಹಳಷ್ಟು ಲೇಖಕರು ಭಾವಿಸಿರುವುದರಿಂದ ವಿಮರ್ಶೆಯು ತಮ್ಮನ್ನು ಪೊರೆಯಬೇಕೆಂದು ಅನೇಕ ಬರಹಗಾರರು ಅಪೇಕ್ಷಿಸುತ್ತಾರೆ. ಸಮಕಾಲೀನ ಸಂಗತಿಗಳ ಬಗ್ಗೆಯೇ ಬರೆಯಬೇಕೆಂದು ಲೇಖಕರನ್ನು ಹೇಗೆ ಒತ್ತಾಯಿಸಲು ಸಾಧ್ಯವಿಲ್ಲವೋ ಹಾಗೆಯೇ ಸಮಕಾಲೀನ ಕೃತಿಗಳ ಬಗ್ಗೆಯೇ ಬರೆಯಬೇಕೆಂದು ವಿಮರ್ಶಕರನ್ನು ಒತ್ತಾಯಿಸಲಾಗದು. ಯಾವ ಸಂಗತಿಗಳು ಲೇಖಕರನ್ನು ಚೋದಿಸುತ್ತವೆಯೋ ಅವುಗಳ ಬಗ್ಗೆ ಅವರು ಬರೆಯುತ್ತಾರೆ. ತಮ್ಮನ್ನು ಚೋದಿಸುವ ಕೃತಿ ಅಥವಾ ಕೃತಿಕಾರರ ಬಗ್ಗೆ ವಿಮರ್ಶಕರು ಬರೆಯುತ್ತಾರೆ. ಯುವ ಲೇಖಕರು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬಹುದೆಂದು ನನಗೆ ಅನ್ನಿಸುತ್ತದೆ. ಯಾಕೆ ನಮ್ಮ ಹೆಚ್ಚಿನ ಯುವ ಬರಹಗಾರರು ಕವಿತೆ ಮತ್ತು ಕತೆಗಳನ್ನು ಮಾತ್ರ ಬರೆಯುವ ಉತ್ಸಾಹ ತೋರುತ್ತಿದ್ದಾರೆ? ವಿಮರ್ಶೆ ಇರಲಿ, ಇತರ ಪ್ರಕಾರಗಳಾದ ಕಾದಂಬರಿ, ನಾಟಕ, ಮಹಾಕಾವ್ಯ ಯಾಕೆ ಅವರಲ್ಲಿ ಆಸಕ್ತಿ ಹುಟ್ಟಿಸುತ್ತಿಲ್ಲ? ನನ್ನ ತಲೆಮಾರಿನ ಹೆಚ್ಚಿನ ವಿಮರ್ಶಕರು ವಿಮರ್ಶೆಯನ್ನೇ ತಮ್ಮ ಪ್ರಧಾನ ಅಭಿವ್ಯಕ್ತಿ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡಂತೆ ಎಷ್ಟು ಜನ ಯುವ ಲೇಖಕರು ವಿಮರ್ಶೆಯನ್ನು ತಮ್ಮ ಪ್ರಾಥಮಿಕ ಆಸಕ್ತಿಯಾಗಿ ಇಟ್ಟುಕೊಂಡಿದ್ದಾರೆ? ಯಾಕೆ ಯುವ ಲೇಖಕರು ಹಿರಿಯ ವಿಮರ್ಶಕರನ್ನೇ ದೂರುತ್ತಿದ್ದಾರೆ? ತಮ್ಮ ಸಮಕಾಲೀನರಲ್ಲಿ ವಿಮರ್ಶಕರನ್ನು ಅರಸುತ್ತಿಲ್ಲ?

5 ನಾನು ವಿಮರ್ಶೆಯನ್ನು ಬರೆಯುವುದು ನನ್ನ ಸಹೃದಯ ಓದುಗರನ್ನು ಗಮನದಲ್ಲಿಟ್ಟುಕೊಂಡು. ಈ ಓದುಗರಲ್ಲಿ ಕೇವಲ ಸಾಹಿತ್ಯದ ವಿದ್ಯಾರ್ಥಿಗಳು, ಅಧ್ಯಾಪಕರು